

## ಪುಸ್ತಕ ಪರಿಚಯ

**ತಂಬೂರಿ ಮೀಟಿದವ**

**ಲೇಖಕರು:** ಡಾ.ಎಚ್.ಎಸ್.ಮುರಳೀಧರ

**ಪ್ರಕಾಶಕರು:** ಅಂಕಿತ ಪುಸ್ತಕ


53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್,

ಗಾಂಧಿಬಜಾರ್ ಮುಖ್ಯ ರಸ್ತೆ,

ಬಸವನಗುಡಿ, ಬೆಂಗಳೂರು 560 004.

**ಪುಟ:** 216 **ಬೆಲೆ:** 120/- ರೂ.

ಡಾ.ಎಚ್.ಎಸ್.ಮುರಳೀಧರ ಅವರು ಬರೆದ ಪುರಂದರದಾಸರ ಅಭಿವ್ಯಕ್ತಿಯ ಅಧ್ಯಯನ "ತಂಬೂರಿ ಮೀಟಿದವ...", ಅವರ ಪಿಎಚ್.ಡಿ ಮಹಾಪ್ರಬಂಧ. ಇದರಲ್ಲಿ ಹತ್ತು ಅಧ್ಯಾಯಗಳಿವೆ. ಮೊದಲ ಅಧ್ಯಾಯದಲ್ಲಿ ಇಂತಹ ಅಧ್ಯಯನದ ಅಗತ್ಯ, ಉದ್ದೇಶ, ಹಿನ್ನೆಲೆಗಳನ್ನು ವಿವರಿಸಿದ್ದಾರೆ. ವಚನಸಾಹಿತ್ಯ ಹಾಗೂ ದಾಸಸಾಹಿತ್ಯಗಳ ದೇಸೀ ಅಭಿವ್ಯಕ್ತಿ ಸ್ವರೂಪದ ಲಕ್ಷಣಗಳನ್ನು ಗುರುತಿಸಿ, ಛಂದಸ್ಸು, ಶೈಲಿಶಾಸ್ತ್ರದ ದೃಷ್ಟಿಯಿಂದ ಕೀರ್ತನೆಗಳು, ಸುಳಾದಿಗಳು ಮತ್ತು ಉಗಾಭೋಗಗಳನ್ನು ಅಧ್ಯಯನ ಮಾಡಿ, ಪುರಂದರದಾಸರ ಕೊಡುಗೆ ಹಾಗೂ ಒಟ್ಟಾರೆ ಮಧ್ಯಕಾಲೀನ ಭಕ್ತಿ ಸಾಹಿತ್ಯದ ಸಾಹಿತ್ಯ ತತ್ತ್ವಗಳನ್ನು ಗ್ರಹಿಸಿದ್ದಾರೆ.




ದೇಸೀ ಅಭಿವ್ಯಕ್ತಿ ಸ್ವರೂಪದ ಹಿನ್ನೆಲೆಯಲ್ಲಿ ದಾಸಸಾಹಿತ್ಯ, ಕೀರ್ತನೆಗಳ ಆಕೃತಿ, ಅಭಿವ್ಯಕ್ತಿಯ ವಿಧಾನಗಳು ಹಾಗೂ ನಿರೂಪಣೆಯ ದನಿಗಳು, ಭಾಷೆಯ ಬಳಕೆ–ಸ್ವರೂಪ ಮತ್ತು ವೈಶಿಷ್ಟ್ಯ ಎಂಬ ಮೊದಲ ಐದು ಅಧ್ಯಾಯಗಳು ಗಾತ್ರದ ದೃಷ್ಟಿಯಿಂದ ಮಹಾಪ್ರಬಂಧದ ಮುಕ್ಕಾಲು ಭಾಗವನ್ನು ವ್ಯಾಪಿಸಿವೆ. ಈವರೆಗೆ ಬಂದ ವಿಮರ್ಶೆಗಳಿಗಿಂತ ಹೆಚ್ಚು ಆಳವಾದ ಒಳನೋಟಗಳನ್ನು ಇವು ಹೊಂದಿವೆ.

ಸ್ತೋತ್ರಗೀತೆಗಳಿಗಿಂತ ಭಿನ್ನವಾಗಿರುವ ಕೀರ್ತನೆಗಳು ವಿಶ್ವಧರ್ಮದ ಜೀವನವಿವೇಕವನ್ನು ಹೊಂದಿದ ಉದಾರ ಮಾನವ ದೃಷ್ಟಿಯನ್ನು ತಳೆದು, ಬದುಕಿ ತೋರಿಸುವ ಅಭಿವ್ಯಕ್ತಿ ಗುಣವನ್ನು ಪಡೆದಿವೆ. ಹೇಗೆ ಬೇಕಾದರೂ ಬಾಗುವ ಕೀರ್ತನೆಯ ಪ್ರಕಾರವನ್ನು, ಸ್ತೋತ್ರರೀತಿಯ ಅಭಿವ್ಯಕ್ತಿಯ ಮಿತಿಯನ್ನು ಮೀರಿ ವ್ಯಕ್ತಿಗತ ಬೇಕುಬೇಡಗಳನ್ನು ಅಭಿವ್ಯಕ್ತಿಸಿ ತೆರೆದುಕೊಳ್ಳುವಂತೆ, ತನ್ನ ಹಾಗೂ ಸಮುದಾಯದ ಅನುಭವವನ್ನು ಒಟ್ಟುಗೂಡಿಸಿ ಶೋಧಿಸುವಂತೆ ಮಾಡಿದ್ದು ಪುರಂದರದಾಸರ ಸಾಧನೆ. ಕೀರ್ತನೆಗೆ ಆಚರಣೆಯ ಅಭಿನೀತ ನೆಲೆಯು ಇದ್ದು, ಆಂಗಿಕ ಅಭಿನಯವು ಇಲ್ಲಿನ ಸಂವಾದಕ್ಕೆ ಕ್ರಿಯಾಶೀಲತೆಯನ್ನು ತಂದು, ಇಲ್ಲಿನ ಭಾವನೆ ವರ್ತಮಾನದಲ್ಲಿ ಸಂಭವಿಸುವಂತೆ ಮಾಡುತ್ತದೆ. ಹೀಗಾಗಿ ದೇವರ ದನಿ ಜನರ ದನಿಯಾಗಬೇಕಾದ ಅಗತ್ಯ ನೆರವೇರುತ್ತದೆ. ಈ ಸಾಧಾರಣೀಕೃತ ಅನುಭವಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳುವ ದಾಸರಿಗೆ ಅಭಿವ್ಯಕ್ತಿಯು ಆಚರಣೆಯ ತಂತ್ರ, ಪದ–ನಾದಗಳ ಆಟ. ಸಾಹಿತ್ಯಕ್ಕೆ ಪ್ರಾಧಾನ್ಯ ನೀಡಿದ ಪುರಂದರದಾಸರು ಬಳಸುವ ರಾಗ–ತಾಳಗಳು ದೇಸೀ ಪದ್ಧತಿಯವು. ಕೀರ್ತನೆಯ ಪಲ್ಲವಿ–ಅನುಪಲ್ಲವಿ–ನುಡಿಗಳ ಆವರ್ತ ಮತ್ತು ಪುನರಾವರ್ತಗಳ ಗತಿಯು ಕವಿತೆಗಿಂತ ಭಿನ್ನ.

೫ನೆಯ ಅಧ್ಯಾಯದಲ್ಲಿ ಪುರಂದರದಾಸರ ಕೃತಿಗಳ ಭಾಷೆಯ ಬಳಕೆಯ ಸ್ವರೂಪ ಮತ್ತು ವೈಶಿಷ್ಟ್ಯವನ್ನು ಲೇಖಕರು ಶೋಧಿಸುತ್ತಾರೆ. ಹಳಗನ್ನಡ, ಸಂಸ್ಕೃತ ಹಾಗೂ ಆಡುಮಾತಿನ ಬಳಕೆ, ಅಭಿವ್ಯಕ್ತಿಯನ್ನು ನಾಟ್ಯೀಕರಿಸಲು ಪುನರುಕ್ತಿ ಹಾಗೂ ಅನುಕರಣವಾಚಿಗಳು, ಅನುಭವವನ್ನು ಮನದಟ್ಟು ಮಾಡುವ ಗಾದೆ–ನುಡಿಗಟ್ಟುಗಳ ಬಳಕೆ, ದ್ವಿಸಂಸ್ಕೃತ ವ್ಯಕ್ತಿತ್ವವನ್ನು ಪ್ರಕಟಪಡಿಸುವ ಭಾಷಾಮಿಶ್ರಣ, ಉರ್ದು, ಇಂಗ್ಲಿಷ್ ಪದಗಳನ್ನು ಜಾನಪದ ಶ್ರವಣ ಪರಿಣಾಮಕ್ಕಾಗಿಯೇ ಬೆರಕೆ ಮಾಡುವುದು; ಉಪಮೆ, ರೂಪಕ, ದೃಷ್ಟಾಂತ, ಪ್ರತಿಮೆ, ಶ್ಲೇಷೆ ಮುಂತಾದ ಅಲಂಕಾರಗಳ ಸಾಹಿತ್ಯಿಕ ಬಳಕೆ – ಇವನ್ನು ಸವಿವರವಾಗಿ ವಿಶ್ಲೇಷಿಸಿದ್ದಾರೆ.

೬ನೆಯ ಅಧ್ಯಾಯದಲ್ಲಿ ತಮ್ಮ ಸಾಹಿತ್ಯತತ್ತ್ವದ ಗ್ರಹಿಕೆಗೆ ಪೂರಕವಾಗಿ ಕೀರ್ತನೆಗಳ ಛಂದಸ್ಸಿನ ವಿನ್ಯಾಸ, ರೂಪಗಳು ಯಾವ ಸಂಗತಿಯನ್ನು ಬಿಟ್ಟುಕೊಡಬಲ್ಲವು ಎಂಬುದನ್ನು ಲೇಖಕರು ಗಮನಿಸಿದ್ದಾರೆ. ನಾಟ್ಯೀಕರಣ, ಅಭಿನಯಕ್ಕೆ ಒಗ್ಗುವ ಕೀರ್ತನೆಗಳಲ್ಲಿ ನಾಲ್ಕು ಮಾತ್ರೆಯ ಲಯ, ಸಿದ್ಧಾಂತ ನಿರೂಪಣೆಯ ಕೀರ್ತನೆಗಳಲ್ಲಿ ಐದು ಮಾತ್ರೆಯ ಲಯ ಇದೆ. ಅಕ್ಷರವನ್ನು ತಾಳಕ್ಕೆ ಹಿಗ್ಗಿಸುವ, ಮಾತ್ರೆಯ ಬಂಧದೊಳಗೇ ಅಂಶಲಯದ ಜೀಕನ್ನು ತರುವ ತಂತ್ರವೂ ಬಳಕೆಯಲ್ಲಿದೆ. ಸಿದ್ಧ ಮಾದರಿಗಳ ನಿರಾಕರಣೆ, ಛಂದಸ್ಸಿನ ಚಾಕ್ಷುಷ ಬದ್ಧತೆಯನ್ನು ಕಾಪಾಡುವುದಕ್ಕಿಂತ ಶ್ರವಣಕ್ಕೆ ಒಗ್ಗಿಸುವ ರೀತಿಯೇ ಹೆಚ್ಚಾಗಿ ಕಂಡುಬರುತ್ತದೆ. ಬದುಕಿನ ಸಂದರ್ಭಕ್ಕೂ

ಕೀರ್ತನೆಗಳ ಛಂದೋ ವಿನ್ಯಾಸಗಳಿಗೂ ಇರುವ ಸಮಾನಾಂತರತೆ, ಸಮುದಾಯ ಅಥವಾ ವ್ಯಕ್ತಿಗಳನ್ನು ಸಂಬೋಧಿಸುವಾಗ ಉದ್ದೇಶಕ್ಕೆ ಅನುಗುಣವಾದ ಸಂದರ್ಭ ಭಾಷೆಯಂತೆಯೆ, ಲಯ ಹಾಗೂ ವಿನ್ಯಾಸಗಳು ಮಾರ್ಪಡುವುದನ್ನು ಲೇಖಕರು ಗುರುತಿಸಿದ್ದಾರೆ. ಪುರಂದರದಾಸರಿಗೆ ಮೂಲಭೂತವಾದ ದ್ವೈತ–ಮಾಧ್ವ–ವೈಷ್ಣವ ಇತ್ಯಾದಿಯಾದ ಸಿದ್ಧಾಂತನೆಲೆ ಒಂದಿದ್ದು, ಅದರ ಪ್ರಚಾರದೊಂದಿಗೇ ತಮ್ಮನ್ನೂ, ತಮ್ಮವರನ್ನೂ, ಇತರರನ್ನೂ ಪ್ರಶ್ನಿಸುವ ಮುಕ್ತ ಧೋರಣೆ, ವಾಸ್ತವಮುಖಿ ಪ್ರವೃತ್ತಿಯೂ ಇದ್ದು ಅವರ ಕೀರ್ತನೆಗಳು ವೈವಿಧ್ಯ ಪಡೆದಿವೆ. ಎಲ್ಲರಿಗೂ ಆಗಿಬರುವ ತೀರಾ ಸರಳ ಆಚರಣೆಯಾದ ನಾಮದ ಬಲ ಅವರನ್ನು ಚಲನಶೀಲವಾಗಿ ಹಿಡಿದಿಟ್ಟಿದೆ. ಸಿದ್ಧಾಂತವು ಹೇಳುವ ದಾರಿಯಲ್ಲಿದ್ದರೆ ನಾಮವು ಅದನ್ನು ಮೀರುವ ಹಾಡುವ ದಾರಿಯನ್ನು ಆರಿಸಿಕೊಳ್ಳುತ್ತದೆ.

೭ನೆಯ ಅಧ್ಯಾಯದಲ್ಲಿ ಸುಳಾದಿಗಳು ಮತ್ತು ಉಗಾಭೋಗಗಳ ಸ್ವರೂಪದ ಚರ್ಚೆಯಿದೆ. ಸುಳಾದಿಯು ದೇಶೀಯ ರಾಗದಲ್ಲಿ ಅಳವಡಿಸಿ, ಬೇರೆ ಬೇರೆ ತಾಳಗಳಲ್ಲಿ ಹೆಣೆದ ನುಡಿಗಳನ್ನುಳ್ಳ ಸಾಹಿತ್ಯರೂಪ. ದಾಸಸಾಹಿತ್ಯದ ಪ್ರಾತಿನಿಧಿಕ ಭಾಷಾರೂಪ ಸುಳಾದಿಗಳಲ್ಲಿದೆ. ನಿರೂಪಣೆ ವಿವರಣೆಯ ರೀತಿಯದು. ಉಗಾಭೋಗವು ಉಕ್ತಿಯನ್ನು ಪೂರೈಸಲು ಛಂದಸ್ಸಿನ ಕಟ್ಟುಪಾಡು ಇಲ್ಲದೆ ರಾಗವನ್ನು ಇರಿಸಿ ಮಾಡಿದ ಸಣ್ಣ ಕವಿತೆ. ಇವುಗಳು ಸ್ವರೂಪದಲ್ಲಿ ವಚನಗಳನ್ನು ಹೋಲುತ್ತವೆ. ಆದರೆ, ವಚನಗಳು ಮೂಲತಃ ಉಕ್ತಿ, ಉಗಾಭೋಗವು ಒಂದು ಗೇಯ ಪ್ರಕಾರ.

೮ನೆಯ ಅಧ್ಯಾಯ ನಿಂದಾಸ್ತುತಿಗಳದು. ಭಕ್ತನ ವಾಸ್ತವತೆಗೆ ಒತ್ತುಕೊಟ್ಟಾಗ ಭಕ್ತಿಯು ಸಕ್ರಿಯವಾಗುವುದು, ಲೌಕಿಕವಾಗುವುದು. ದೇವರು ತನ್ನ ನಾಮವನ್ನು ಹಿಡಿದು ಎಳೆಯುವ ಭಕ್ತನ ಅಧೀನ. ವ್ಯವಸ್ಥೆಯ ಸ್ಥಾಯಿತ್ವವನ್ನು ನಿರಾಕರಿಸಲು ದಾಸರಿಗೆ ಬಲ ನೀಡುವುದು ತಮ್ಮನ್ನು ಈ ನಾಮದೊಂದಿಗೆ ಗುರುತಿಸಿಕೊಳ್ಳುವಿಕೆಯೆ. ನಿಂದಾಸ್ತುತಿಯ ಅಭಿವ್ಯಕ್ತಿಯ ಸ್ವರೂಪದಲ್ಲಿ ದೈವದೊಂದಿಗಿನ ಸಂಬಂಧವನ್ನು ಮಾನವೀಕರಣಗೊಳಿಸುವ ಗುಣವಿದೆ. ದಾಸರಿಗೆ ಗೌರವವೂ ಇದೆ–ಬೈಗುಳಗಳ ಸಂದರ್ಭಭಾಷೆ ಇಲ್ಲಿಲ್ಲ. ನಿಂದೆಯ ಮೂಲಕ ಆಪ್ತತೆ, ವ್ಯಂಗ್ಯವನ್ನು ಪ್ರಕಟಿಸುವುದು ಅವರ ಉದ್ದೇಶ.

೯ನೆಯ ಅಧ್ಯಾಯದಲ್ಲಿ ಅಂಕಿತದ ಪ್ರಯೋಗದ ಬಗ್ಗೆ ಚರ್ಚೆ ಇದೆ. ಇಲ್ಲೂ ನಾಮದ ಪರಿಕಲ್ಪನೆ ಪ್ರಮುಖವಾಗಿ ಬಂದಿದೆ. ಕರ್ತೃತ್ವದ ನೆಲೆಯಲ್ಲಿ ತನ್ನ ಬದಲಾಗಿ ದೈವವನ್ನೇ ನಿಲ್ಲಿಸುವ ಪ್ರಯತ್ನವಿದೆ. ಕೆಲವೆಡೆ ತನ್ನ ಅಸ್ತಿತ್ವ ಉಳಿದರೂ, ಇಷ್ಟದೈವದ ಸಾಕ್ಷಿತ್ವದಲ್ಲಿ ಮಾತನಾಡುವ ಪ್ರಯತ್ನವಿದೆ. ಕೀರ್ತನೆಗಳಲ್ಲಿ ಮೊದಲ ಮಾದರಿ ಹೆಚ್ಚಾಗಿದ್ದರೆ, ವಚನಗಳಲ್ಲಿ ಎರಡನೆಯ ಮಾದರಿ ಹೆಚ್ಚು. ಅಂಕಿತದ ಉಪಯೋಗ ಹತ್ತಾರು ಬಗೆ: ಮುಕ್ತಾಯ ಸೂಚನೆ, ನಿರ್ಣಯ ಘೋಷಣೆ, ಹೇಳುವಿಕೆಯ ಗುರಿ, ಕರ್ತೃತ್ವ ಒಪ್ಪಿಸುವಿಕೆ, ದೈವದ ಮೂಲಕ ಉಳಿದವರೊಂದಿಗೆ ಸಂಬಂಧ ಕಲ್ಪನೆ, ಲೋಕದ ವಿವರವನ್ನು ದೈವದ ಸಂಬಂಧದಲ್ಲೆ ವ್ಯಾಖ್ಯಾನಿಸುವುದು, ಸಮಕಾಲೀನತೆಯನ್ನು ಸೂಚಿಸುವುದು ಇತ್ಯಾದಿ.

ಈ ಮೇಲಿನ ಎಲ್ಲ ಅಂಶಗಳನ್ನು ಕೊನೆಯ ಅಧ್ಯಾಯದಲ್ಲಿ ಸಂಗ್ರಹವಾಗಿ ಹೇಳಿ ಲೇಖಕರು ಮುಂದೆ ನಡೆಯಬೇಕಾಗಿರುವ ಸಂಶೋಧನೆಯತ್ತ ಕೈತೋರುತ್ತಾರೆ. ಕೃತಿಯ ಬಗ್ಗೆ ಹೇಳುವುದಾದರೆ, ಲೇಖಕರು "ಪುರಂದರದಾಸರ ಅಭಿವ್ಯಕ್ತಿಯ ಅಧ್ಯಯನ" ಎಂದಿದ್ದರೂ, ಅಧ್ಯಯನವು ಇಡೀ ದಾಸಸಾಹಿತ್ಯದ ಧೋರಣೆಗಳನ್ನು ಕುರಿತಂಥದ್ದು ಎನ್ನಿಸುತ್ತದೆ. ತೌಲನಿಕವಾಗಿ ಅಲ್ಲಲ್ಲಿ ವಚನಸಾಹಿತ್ಯದೊಡನೆ ಹೋಲಿಸುವುದರಿಂದ ಮಧ್ಯಯುಗೀನ ಭಕ್ತಿಸಾಹಿತ್ಯದ ಅಭಿವ್ಯಕ್ತಿಯ ರೂಪಗಳನ್ನು ಅಧ್ಯಯನ ಮಾಡಿದ ಅನುಭವವುಂಟಾಗುತ್ತದೆ. ಮಧ್ವಮತವು ದಕ್ಷಿಣದಲ್ಲಿ ಆಗ ಬಳಕೆಯಲ್ಲಿದ್ದ ಕ್ರೈಸ್ತಮತಕ್ಕೆ ಪ್ರತಿಕ್ರಿಯೆಯಂತೆ ಹೊಮ್ಮಿದ್ದು ಎಂಬ ವಾದವೂ ಇದೆ. ಕ್ರೈಸ್ತ ಸ್ತೋತ್ರಗೀತೆಗಳ ಹೊಸತನ, ಎಲ್ಲವನ್ನೂ ತೆರೆದಿಡುವ ಲಕ್ಷಣಗಳು ಕೀರ್ತನೆಗಳಲ್ಲಿಯೂ ಇರಬಹುದೆ? ದೇವರನ್ನು ನಂಬಿದರೆ ಸಾಕು, ಉದ್ಧಾರದ ಜವಾಬ್ದಾರಿ ಆತನದು ಎಂಬ ವಿಚಾರ, ಭಕ್ತರು–ನಿತ್ಯನಾರಕಿಗಳ ವೈರುಧ್ಯ—ಈ ಎರಡು ನೆಲೆಗಳಲ್ಲಿ ಕ್ರೈಸ್ತಧರ್ಮದ ಪ್ರಭಾವವನ್ನು ಕಾಣಬಹುದೆ? ಈ ಬಗೆಗೆ ತುಸು ವಿಚಾರ ಮಾಡಬಹುದಿತ್ತು.

ಸಾಮಾನ್ಯರಿಗೆ ಕ್ಲಿಷ್ಟ ಎನ್ನಿಸುವ ಭಾಷೆಯಲ್ಲಿ ಬರೆದ ಇಂತಹ ಪಿಎಚ್.ಡಿ. ಮಹಾಪ್ರಬಂಧಗಳನ್ನು ಪ್ರಕಟಿಸುವಾಗ ಸರಳ ಭಾಷೆಯಲ್ಲಿ ಸಾರಸಂಗ್ರಹವನ್ನೂ ಒಟ್ಟಿಗೆ ಕೊಡುವ ಸಂಪ್ರದಾಯವಿದ್ದರೆ ಚೆನ್ನಾಗಿತ್ತು ಎನ್ನಿಸುತ್ತದೆ. ಇಲ್ಲವಾದಲ್ಲಿ ಆಯಾ ಕ್ಷೇತ್ರದಲ್ಲಿ ಕೆಲಸಮಾಡುವ ಸಂಶೋಧಕರುಗಳಿಗೆ ಮಾತ್ರ ಇಂತಹ ಪ್ರಕಟನೆಗಳಿಂದ ಪ್ರಯೋಜನವಾದೀತು.

—ಡಾ. ಪಾಂಡುರಂಗ ವಿಠಲ
ಸದ್ವಿದ್ಯಾ ಪಾಠಶಾಲಾ
ಮೈಸೂರು

## ಆಶ್ರಮದ ವಿಶೇಷ ಉತ್ಸವದ ದಿನಗಳು

ಮೇ ೨೦೦೭

| | | |
|---|---|---|
| ಶ್ರೀ ಬುದ್ಧ ಜಯಂತಿ | ಬುಧವಾರ | ೦೨ |
| ಏಕಾದಶಿ | ಮಂಗಳವಾರ | ೧೩ |
| ಏಕಾದಶಿ | ಭಾನುವಾರ | ೨೭ |